ಓ.ಎಸ್.185/2021 ಪಿ.ಡಬ್ಲು-2
ರಮೇಶ ತಂದೆ ಕೃಷ್ಣಪ್ಪ

ದಿ.01-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಮುಂದುವರೆದ ಪಾಟೀ ಸವಾಲು : ಶ್ರೀ. ವಿ.ಜೆ.ಕೆ ವಕೀಲರಿಂದ :-*

ನ್ಯಾಯಾಲಯದ ಡಿಕ್ರಿಯಾದ ವಿಚಾರ ನನಗೆ ಗೊತ್ತಿರಲಿಲ್ಲ. ನ್ಯಾಯಾಲಯದ ಡಿಕ್ರಿಯಂತೆ ದಾವಾ ಆಸ್ತಿಯನ್ನು ಅಳೆಯಲು ಬರುವುದಾಗಿ ನಮಗೆ ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇಲ್ಲದ್ದರಿಂದ ಸದರಿ ನೋಟಿಸು ನೀಡಿದ್ದು ಮತ್ತು ಅಳತೆ ಮಾಡಲು ಬಂದಿದ್ದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ನೋಡಿ ಆಸ್ತಿಯನ್ನು ಖರೀದಿಸಿರುತ್ತೇನೆ. ದಾವಾ ಆಸ್ತಿಯ ಪಹಣಿ ನಾನು ಖರೀದಿ ಮಾಡುವ ಸಮಯದಲ್ಲಿ ಹನುಮಂತಪ್ಪ ರವರ ಹೆಸರಿನಲ್ಲಿ ಇತ್ತು. 15-20 ವರ್ಷಗಳ ಪಹಣಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಮೊದಲು ಹನುಮಂತಪ್ಪರವರ ತಂದೆ ಶಿವಶಂಕ್ರಪ್ಪ ರವರ ಹೆಸರಿನಲ್ಲಿ ಇತ್ತು. ನಂತರ ಹನುಮಂತಪ್ಪ ರವರ ಹೆಸರಿನಲ್ಲಿ ಇತ್ತು. ಹನುಮಂತಪ್ಪ ವಯಸ್ಕನಾದ ಮೇಲೆ ಅವರ ಹೆಸರಿನಲ್ಲಿ ಪಹಣಿಯಾಗಿತ್ತು. ಪಹಣಿಯಲ್ಲಿ ಭೀಮವ್ವ ಮತ್ತು ಸಿದ್ದವ್ವ ರವರ ಹೆಸರು ಇರಲಿಲ್ಲ. ನಾವು ಪಹಣಿಯನ್ನು ನೋಡಿ ಖರೀದಿ ಮಾಡಿರುತ್ತೇವೆ. ನ್ಯಾಯಾಲಯದಲ್ಲಿ ಕೇಸು ಇದ್ದ ಬಗ್ಗೆ ನಾವು ವಿಚಾರಣೆ ಮಾಡಿರುವುದಿಲ್ಲ. ಹನುಮಂತಪ್ಪ ರವರ ಕುಟುಂಬದ ಬಗ್ಗೆ ತಿಳಿದುಕೊಂಡು ಖರೀದಿ ಮಾಡಿರುತ್ತೇನೆ ಎಂದರೆ ಸರಿ.

2. ನಾವು ಜಮೀನು ಖರೀದಿಸುವ ಪೂರ್ವದಲ್ಲಿ ಹನುಮಂತಪ್ಪ ಮತ್ತು ಅವರ ಹೆಂಡತಿ ಭೀಮವ್ವ ಮತ್ತು ಸಿದ್ದವ್ವ ರವರಿಂದ ಬೇರೆಯಾಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಖರಿದಿ ಮಾತುಕತೆ ಕರಡಕಲ್ಲನ ಗಿರಿಮಲ್ಲನಗೌಡ ರವರ ಮನೆಯಲ್ಲಿ ಆಗಿರುತ್ತದೆ. ಖರೀದಿ ಮಾತುಕತೆ ಸಮಯದಲ್ಲಿ ಗಿರಿಮಲ್ಲನಗೌಡ, ನಾನು ಮತ್ತು ನಮ್ಮ ತಂದೆ, ಹನುಮಂತಪ್ಪ, ಭೀಮವ್ವ ಇದ್ದರು. ಸದರಿ ಮಾತುಕತೆಯಲ್ಲಿ ಸಿದ್ದಮ್ಮ ಇರಲಿಲ್ಲ. ಮಾತುಕತೆಯಾದ ಒಂದು ವರ್ಷಕ್ಕೆ ಖರೀದಿಯಾಗಿರುತ್ತದೆ. ದಿನಾಂಕ 23-05-1995 ರಲ್ಲಿ ಖರೀದಿ ಆಗಿರುತ್ತದೆ. ಸದರಿ ಖರೀದಿ ದಿನ ಹನುಮಂತಪ್ಪ, ಗಿರಿಮಲ್ಲನಗೌಡ, ಬಸಣ್ಣ, ಭೀಮವ್ವ ಬಂದಿದ್ದರು. ಗಿರಿಮಲ್ಲನಗೌಡರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಭೀಮವ್ವ ಮತ್ತು ಹನುಮಂತ ಖರೀದಿ ಹಣವನ್ನು ಪಡೆದಿರುತ್ತಾರೆ. ಭೀಮವ್ವ ಆ ದಿನ ಬಂದಿರಲಿಲ್ಲ. ಹನುಮಂತನ ಕೈಯಲ್ಲಿ ನಾವು ಹಣವನ್ನು ನೀಡಿರುತ್ತೇವೆ. ಮನೆಗೆ ಹೋಗಿ ಭೀಮವ್ವನ ಸಹಿಯನ್ನು ಮಾಡಿಸಿರುತ್ತಾರೆ. ನೊಂದಣಾಧಿಕಾರಿಗಳ ಕಚೇರಿಗೆ ಹನುಮಂತ ಒಬ್ಬನೆ ಬಂದಿದ್ದ. ಖರೀದಿ

ಹಣವನ್ನು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಹನುಮಂತನ ಕೈಯಲ್ಲಿ ನೀಡಿರುತ್ತೇವೆ. ದಾವಾ ಆಸ್ತಿಯಲ್ಲಿ ಮೊದಲು ಭೀಮವ್ವ, ಸಿದ್ದವ್ವ, ಹನುಮಂತ ಸ್ವಾಧೀನದಲ್ಲಿ ಇದ್ದರು. ಈಗ ಎಲ್ಲರೂ ಬಂದಿರುತ್ತಾರೆ. ನಾವು ದಾವಾ ಆಸ್ತಿಯ ಸ್ವಾಧೀನಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಹೆಸರಿನಲ್ಲಿ ಪಹಣಿಗಳು ಇವತ್ತಿಗೂ ಆಗಿಲ್ಲ ಎಂದರೆ ಸರಿಯಲ್ಲ.

೩. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರದೇ ಇದ್ದರೂ ಸುಳ್ಳು ದಾವಾ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.